IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಕನ್ನಡ ಸಾಹಿತ್ಯದ ಮೂಲಕ ಪರಿಸರ ಪ್ರೇಮ ಮೂಡಿಸುವ ಲೇಖನಗಳು

**ಮಾರ್ಗದರ್ಶಕರು.**

ಡಾ.ಶಿವಕುಮಾರ್.ಡಿ,ಸಿ

ಜೈನ್ ಡೀಮ್ಡ್ ಟು.ಬಿ.ವಿಶ್ವವಿದ್ಯಾಲಯ.

ಬೆಂಗಳೂರು.

**ಸಂಶೋಧನಾರ್ಥಿ**

ಶಶಿಕಲಾ.ಯು.

ಜೈನ್ ಡೀಮ್ಡ್ ಟು.ಬಿ.ವಿಶ್ವವಿದ್ಯಾಲಯ.

ಬೆಂಗಳೂರು.

**ಪೀಠಿಕೆ**;

ಪರಿಸರ ಎಂದರೆ ಇದು ಒಂದು ವೈಜ್ಞಾನಿಕ ಲೇಖನ ಎನ್ನುವ ಕಲ್ಪನೆ ಮೂಡುತ್ತದೆ. ಆದರೆ ಇದು ಸಾಹಿತ್ಯದ ಲೇಖನ. ಅಂದರೆ ನಾವು ನಮ್ಮ ಕನ್ನಡ ಸಾಹಿತ್ಯದ ಮೂಲಕ ಓದುಗರಿಗೆ ನಮ್ಮ ಪರಿಸರದ ಬಗ್ಗೆ ಅರಿವನ್ನು ಮೂಡಿಸುವುದೇ ಮುಖ್ಯ ಉದ್ದೇಶ. ಅಲ್ಲದೆ ನಮ್ಮ ಕನ್ನಡದ ಕವಿಗಳು ತಮ್ಮ ಲೇಖನಗಳಲ್ಲಿ, ಕವಿತೆಗಳಲ್ಲಿ ಹೇಗೆ ಪರಿಸರವನ್ನು, ಅದಕ್ಕಾಗುವ ಹಾನಿಯ ಅರಿವನ್ನು ಮೂಡಿಸಿರುವುದನ್ನು ಕಾಣುತ್ತೇವೆ. ಕವಿಗಳಿಗೆ ತಮ್ಮ ಕವನವನ್ನು ಬರೆಯುವುದರೊಂದಿಗೆ ಹೂವು ಹಣ್ಣು ಗಿಡ ಮರಗಳನ್ನು ಇಲ್ಲಿ ವರ್ಣನೆಗೆ ತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಆದುದರಿಂದ ಇಲ್ಲಿ ಬರುವ ಲೇಖನಗಳು, ಕಥೆಗಳು ಉತ್ತಮ ಪರಿಸರ ಪ್ರೇಮವನ್ನು ಮೂಡಿಸುತ್ತವೆ. ಅಲ್ಲದೆ ಈ ಲೇಖನಗಳಲ್ಲಿ ನಮ್ಮ ಪರಿಸರಕ್ಕೆ ಹಾನಿಯಾಗದಂತೆ ಕಾಪಾಡುವ, ಅದಕ್ಕೆ ಹೇಗೆ ಹಾನಿಯಾಗುತ್ತಿದೆ, ಪರಿಸರದ ಈ ಜೀವಿಗಳ ಉಪಯೋಗವೇನು ಎಂಬುದನ್ನು ಕಾಣುತ್ತೇವೆ.

ಪರಿಸರ ಸಂರಕ್ಷಣೆ ನಮ್ಮ ಕರ್ತವ್ಯ, ಪ್ರಕೃತಿ ಮನುಷ್ಯನ ಜೀವನಕ್ಕೆ ಏನೆಲ್ಲ ಕೊಟ್ಟಿದೆ. ಅಂತಹದರಲ್ಲಿ ಮನುಷ್ಯ ತನ್ನ ವೈಯಕ್ತಿಕ ಪ್ರಯೋಜನಕ್ಕಾಗಿ ಪರಿಸರದ ಮೇಲೆ ನಿರಂತರ ದಾಳಿ ನಡೆಸಿದ್ದಾನೆ. ಇಂತ ಪರಿಸ್ಥಿತಿ ಹೀಗೆ ಮುಂದುವರೆದರೆ ನಮ್ಮ ಸರ್ವನಾಶ ನಮ್ಮ ಕಣ್ಣೆದುರೆ ನಡೆಯಲಿದೆ. ಇದು ನಡೆಯಬಾರದೆಂದರೆ ಇಂದಿನಿಂದಲೆ ಪರಿಸರದ ಸಂರಕ್ಷಣೆ ಬಗ್ಗೆ ಕಾಳಜಿ ವಹಿಸುವುದು ಮುಖ್ಯ. ಪರಿಸರದ ಸಂರಕ್ಷಣೆಗಾಗಿ ನಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತುವ ಅವಶ್ಯಕತೆ ಇಲ್ಲ. ನಮ್ಮ ದೈನಂದಿನ ಜೀವನದಲ್ಲಿ ಕೆಲವೊಂದು ಕ್ರಮಗಳನ್ನು ಅನುಸರಿಸಿದರೆ ಅದೇ ಪರಿಸರ ಉಳಿವಿಗೆ ಸಹಾಯಕವಾಗುತ್ತದೆ.

ನಾವು ನಿಸರ್ಗದ ಜೊತೆ ಬೆರೆತು ಬಾಳಿದರೆ ಪರಿಸರದ ಮೇಲೆ ದುಷ್ಪರಿಣಾಮ ಬೀರುವ, ಪರಿಸರದ ಉಳಿವಿಗೆ ಪೂರಕವಾಗುವ ವಿಷಯಗಳ ಬಗ್ಗೆ ನಮ್ಮ ಸಾಮಾನ್ಯ ಜ್ಞಾನ ತಾನಾಗಿಯೇ ಬೆಳೆಯುತ್ತದೆ. ಆದರೆ ಅದು ಅಷ್ಟು ಸುಲಭವಲ್ಲ, ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನದ ಆವಿಷ್ಕರದಿಂದ ಇಂದಿನ ಮಾನವನ ಜೀವನ ಹಾಗೂ ಚಟುವಟಿಕೆಗಳು ಅತ್ಯಂತ ಸಂಕೀರ್ಣವಾಗಿವೆ. ಇದರಿಂದ ಹೆಚ್ಚಿನ ಮನುಷ್ಯರು ಪ್ರಕೃತಿಯಿಂದ ದೂರಾಗಿ ವಿವಿಧ ನೈಸರ್ಗಿಕ ಚಟುವಟಿಕೆಗಳಲ್ಲಿ ಕಾಲಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ,

ಮನುಷ್ಯನ ಉದಾಸೀನತೆ, ತಿಳಿಗೇಡಿತನದಿಂದ ನಿಸರ್ಗ ಬಸವಳಿಯುತ್ತಾ ಸಾಗುತ್ತಿದೆ, ಈ ಪ್ರಕ್ರಿಯೆಯಲ್ಲಿ ನಾವೆಲ್ಲರೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗಿದಾರರು ಎಂಬುದು ಕೂಡ ನಮಗೆಲ್ಲರಿಗೂ ಈಗ ಚೆನ್ನಾಗಿ ಗೊತ್ತಾಗಿರುವ ಸತ್ಯ. ಈ ಬಗ್ಗೆ ಕಾಳಜಿ, ಚಿಂತೆ ಇರುವವರನ್ನೂ ಗಾಢವಾಗಿ ಕಾಡುತ್ತಿರುವ ಪ್ರಶ್ನೆ ಎಂದರೆ – ಈ ನಿಟ್ಟಿನಲ್ಲಿ ನಾವೇನು ಮಾಡಬಹುದು?

ಹಲವಾರು ಅಣೆಕಟ್ಟುಗಳನ್ನು ಕಟ್ಟಿ ನದಿ ಪಾತ್ರದ ಕಾಡನ್ನು ನಾಶ ಮಾಡಲಾಯಿತು. ಆಗ ಜನರಿಂದ ಪರಿಸರ ಜಾಗೃತಿ ಚಳುವಳಿಗಳು ಪ್ರಾರಂಭವಾದವು. ಅದರಲ್ಲಿ ಡಾ. ಮಾಧವ ಗಾಡ್ಗೀಳರಂತೂ ಪರಿಸರ ಸಂರಕ್ಷಣೆಯ ಹರಿಕಾರರೆಂದೇ ಹೆಸರಾದರು. ಬೆಂಗಳೂರಿನ ಹೆಸರಾಂತ ಸಸ್ಯವಿಜ್ಞಾನಿ ಡಾ. ಶಫೀವುಲ್ಲಾ ಶರಾವತಿಕೊಳ್ಳದ ಟೇಲ್ ರೇಸ್ ಯೋಜನೆಯಲ್ಲಿ ಮುಳುಗಡೆಯಾಗಬಹುದಾದ ಪ್ರಭೇದಗಳ ಪಟ್ಟಿ ತಯಾರಿಸಿದರು. ಮತ್ತೆ ಅರಣ್ಯ ಇಲಾಖೆ ದಾಂಡೇಲಿ, ಅಣಶಿ, ಭದ್ರಾ, ಬ್ರಹ್ಮಗಿರಿ, ಪುಷ್ಪಗಿರಿ ಮುಂತಾದ ಸಂರಕ್ಷಿತ ರಾಷ್ಟ್ರೀಯ ವನಧ್ಯಾಮಗಳೆಂದು ಪರಿಗಣಿಸಲಾಯಿತು. ಕುದುರೆ ಮುಖವನ್ನು ನವ್ಯಧಾಮಗಳೆಂದು ಗುರುತಿಸಲಾಯಿತು.

ಹೀಗೆ ಪರಿಸರವನ್ನು ಉಳಿಸಲು ಏನೆಲ್ಲಾ ಶ್ರಮವಹಿಸಬೇಕಾಗಿದೆ ಎಂಬುದನ್ನು ಇಲ್ಲಿ ಕಾಣುತ್ತೇವೆ. ಈ ನಿಟ್ಟಿಲ್ಲಿ ಅರಿವನ್ನು ಮೂಡಿಸುವುದು ಮುಖ್ಯ. ಅರಿವನ್ನು ಮೂಡಿಸಲು ಸಾಹಿತ್ಯ ಮಾರ್ಗವೂ ಸಹ ಉತ್ತಮ. ಇದೂ ಸಹ ಬೇಗನೆ ಜನರ ಮನ ತಲುಪುತ್ತದೆ. ಅರಿವನ್ನು ಮೂಡಿಸಲು ಸಹಾಯ ಮಾಡುತ್ತದೆ. ಸಾಹಿತ್ಯ ಮಾರ್ಗ ಎಳೆ ಮಕ್ಕಳಾದಿಯಾಗಿ ವಯೋವೃದ್ದವರೆಗೆ ಎಲ್ಲರಿಗೂ ಬಹು ಬೇಗನೆ ತಲುಪುವುದರಿಂದ ಈ ಮಾರ್ಗ ಪರಿಸರ ಜಾಗೃತಿ ಮೂಡಿಸಲು ಬಹು ಉತ್ತಮ ಮಾರ್ಗ ಎಂದು ನನ್ನ ಅಭಿಪ್ರಾಯ.

## ಗುರಿ ಉದ್ದೇಶಗಳು

- ಪರಿಸರದ ಮೇಲಿನ ಕಾಳಜಿಯನ್ನು ಹೆಚ್ಚಿಸುವುದು
- ಜೀವಿಗಳ ಅವಶ್ಯಕಥೆಯನ್ನು ಅರಿಯುವುದು
- ಜೀವ ಪರಿಸರವನ್ನು ಅಭಿವೃದ್ಧಿ ಪಡಿಸುವುದು
- ಅಳಿವಿನಂಚಿನ ಪ್ರಾಣಿಗಳ ಬಗ್ಗೆ ಅರಿವನ್ನು ಮೂಡಿಸುವುದು
- ಪರಿಸರ ಹಾನಿಗೆ ಕಾರಣಗಳನ್ನು ತಿಳಿಸುವುದು
- ಕನ್ನಡ ಸಾಹಿತ್ಯದ ಮೂಲಕ ಪರಿಸರದ ಬಗ್ಗೆ ಅರಿವನ್ನು ಮೂಡಿಸುವುದು.
- ನಮ್ಮ ಕನ್ನಡ ಸಾಹಿತ್ಯಕ್ಕೆ ನಮ್ಮ ಲೇಖಕರ ಕೊಡುಗೆಗಳನ್ನು ತಿಳಿಯಪಡಿಸುವುದು

ನಮ್ಮ ಈ ಭೂಮಿ ತನ್ನ ಒಡಲಿನ ಎಲ್ಲಾ ಕಡೆ ಹಲವಾರು ಜೀವ ಜಂತುಗಳಿಗೆ ಆಶ್ರಯ ನಡಿದೆ. ಪ್ರಾಕೃತಿಕ ವ್ಯವಸ್ಥೆಯಲ್ಲಿ ಜೀವಿಗಳಿರುವಷ್ಟು ಮತ್ತೊಂದು ಇಲ್ಲ. ಒಂದು ಹುಲ್ಲುಗಾವಲಿನಲ್ಲಿ ವಿವಿಧ ಬಗೆಯ ಪ್ರಾಣಿಗಳು, ಕೀಟಗಳು, ಸರಿಸೃಪಗಳು, ಎಲ್ಲವೂ ಕ್ರಮಬದ್ಧವಾಗಿ ಜೀವಿಸುತ್ತಿರುತ್ತವೆ. ಮನೆಯ ಅಂಗಳದ ಲಾನ್‌ನಲ್ಲಿನ ಹುಲ್ಲಿನಲ್ಲಿ ಸಹ ಹಲವಾರು ಬಗೆಯನ್ನು ಕಾಣುತ್ತೇವೆ. ಅದರಲ್ಲಿ ಹಲವಾರು ಬಗೆಯ ಕೀಟಗಳನ್ನು ಕಾಣುತ್ತೇವೆ. ಇವೆಲ್ಲಾ ಒಂದಕ್ಕೆ ಒಂದು ಸಂಬಧವನ್ನು ಹೊಂದಿ ಒಂದು ಬಗೆಯಲ್ಲಿ ಜೀವನ ಚಕ್ರವನ್ನು ಹೊಂದಿರುವುದನ್ನು ಕಾಣುತ್ತೇವೆ. ಆದರೆ ಎಲ್ಲಾ ಜೀವಿಗಳಿಗೆ ಆಶ್ರಯ ತಾಣ ಈ ಭೂಮಿ ಮಾತ್ರ. ನಮ್ಮ ಜೀವಿಗಳ ಆಹಾರ ಕೊಂಡಿಯನ್ನು ನೋಡಿದಾಗ ಒಂದನ್ನು ಮತ್ತೊಂದು ಅವಲಂಬಿಸಿ ಮತ್ತೊಂದು ಬದುಕುವುದನ್ನು ಕಾಣುತ್ತೆವೆ. ಇದೇ ನಮ್ಮ ಪ್ರಕೃತಿಯು ನಮಗೆ ನೀಡಿದ ಅತೀದೊಡ್ಡ ಕೊಡುಗೆ. ಇದೇ ಆಹಾರ ವರ್ತುಲ. ಈ ವಿಚಾರದಲ್ಲಿ ನಮ್ಮ ಕನ್ನಡ ಸಾಹಿತ್ಯದ ಮೂಲಕ ನಾವು ಅರಿವನ್ನು ಮೂಡಿಸಿದರೆ ಪರಿಸರವನ್ನು ರಕ್ಷಿಸಲು, ಪರಿಸರದಲ್ಲಿನ ಹಲವಾರು ಜೀವಿಗಳ ಉಪಯೋಗವನ್ನು ಅರಿಯಲು ಸಹಾಯವಾಗುತ್ತದೆ.

ನಮ್ಮ ಪೂರ್ಣಚಂದ್ರ ತೇಜಸ್ವಿಯವರ ಮೂಲಿಕೆ ಬಳ್ಳಿ ಸುತ್ತ ಎಂಬ ಲೇಖನವನ್ನು ಓದಿದಾಗ ಇಲ್ಲಿನ ಮೂಲಿಕೆಗಳು, ಅವುಗಳ ಬಳಕೆಯ ಬಗ್ಗೆ ಅರಿವನ್ನು ಮೂಡಿಸಲು ಸಾಧ್ಯ.

ವಿಳ್ಯದಎಲೆಯಂತ ಎಲೆ ದ್ರಾಕ್ಷಿಗೊಂಚಲಿನಂತೆ ಕಾಯಿಗಳು ಮಳೆ ಬಿದ್ದ ತಕ್ಷಣ ನೆಲದಿಂದ ಮೇಲೆ ಏಳುವ ಈ ಬಳ್ಳಿ ಮತ್ತೆ ಕಾಯಿಬಿಟ್ಟು ಮತ್ತೆ ಸತ್ತು ಹೋಗುತ್ತದೆ. ಆದುದರಿಂದ ಈ ಬಳ್ಳಿಯನ್ನು ಬದುಕಿರುವಾಗಲೇ ಕಟ್ಟಿ ಇಟ್ಟಿರುತ್ತಾರೆ. ಈ ಬಳ್ಳಿಯಲ್ಲಿ ಔಷಧಿಯ ಗುಣವಿರುತ್ತದೆ. ಇಂತ ಬಳ್ಳಿಯನ್ನು ಉಳಿಸಿಕೊಳ್ಳುವುದು, ಇದರ ಬಗ್ಗೆ ಇದರ ಮಹತ್ವವನ್ನು ಅರಿಯುವುದು ಬಹು ಮುಖ್ಯ. ಹೀಗೆ ಈ ಬಗೆಯ ವಿಷಯಗಳನ್ನು ನಮ್ಮ ಕನ್ನಡ ಸಾಹಿತ್ಯದ ಮೂಲಕ ತಿಳಿಯ ಪಡಿಸಿದರೆ ನಮ್ಮ ಪರಿಸರವೂ ಉಳಿಯುತ್ತದೆ. ಔಷಧೀಯ ಮೂಲಿಕೆಗಳೂ ಉಳಿಯುತ್ತವೆ.

ಇದೇ ಲೇಖನದಲ್ಲಿ ಲೇಖಕರು ಹೇಳಿದಂತೆ ಮಾರ ಕಳಲಿ ಕತ್ತರಿಸುವಾಗ ಕೈ ಬೆರಳು ಕತ್ತರಿಸಿರುತ್ತದೆ. ಅದಕ್ಕೆ ಒಂದು ಬಗೆಯ ಎಲೆಯನ್ನು ಕತ್ತರಿಸಿದ ಭಾಗಕ್ಕೆ ಆ ಎಲೆಗಳನ್ನು ಹಾಕಿದಾಗ ಕೈಯಲ್ಲಿರುವ ರಕ್ತವನ್ನೇ ನಿಲ್ಲಿಸಿರುತ್ತದೆ. ಈ ಬಗೆಯ ಗಿಡಮೂಲಿಕೆಗಳು ನಮ್ಮ ಸುತ್ತ ಮುತ್ತ ಇರುತ್ತವೆ. ಇದರ ಅರಿವು ನಮಗೆ ಇರುವುದಿಲ್ಲ. ನಮ್ಮ ಸಾಹಿತ್ಯದ ಮೂಲಕ ತಿಳಿಸಿದರೆ ಈ ಮೂಲಿಕೆಗಳೂ ಉಳಿಯುತ್ತವೆ, ಪರಿಸರ ಸಹ ಉಳಿಯುತ್ತದೆ.

ರೆಫ್ಲೀಸಿಯಾ ಇದು ಹೂವಿನ ಜಾತಿಯಲ್ಲೇ ಅತೀ ದೊಡ್ಡದು, ಆದರೆ ವಾಸನೆಮಾತ್ರ ಕೆಟ್ಟದಾಗಿರುತ್ತದೆ. ಅದರೆ ನಮ್ಮ ದುಂಬಿಗಳಿಗೆ ಮಾತ್ರ ಇವು ಅತೀ ಆಕರ್ಷಕವಾಗಿದೆ ಈ ಬಗೆಯ ಹೂವುಗಳು ನಮ್ಮ ಪ್ರಕೃತಿಯಲ್ಲಿ ಇರುವುದರಿಂದ ಕವಿಗಳು ತಮ್ಮ ಕಾವ್ಯರಚನೆಯಲ್ಲಿ ಇವುಗಳ ವರ್ಣನೆಯನ್ನು ಮಾಡಲು ಸಾಧ್ಯವಾಗುತ್ತದೆ. ಹೀಗೆ ನಮ್ಮ ಕನ್ನಡ ಸಾಹಿತ್ಯದ ಮೂಲಕ ಈ ಬಗೆಯ ಪರಿಸರದ ಹೂವು, ಜೀವಿಗಳನ್ನು ಪರಿಚಯಿಸಿದರೆ ಉತ್ತಮ.

ಸೂರ್ಯ ಕಾಂತಿ ಇದು ನಮ್ಮ ಕವಿ ಪ್ರಪಂಚಕ್ಕೆ ತುಂಬಾ ಮನಮುದುಗೊಳಿಸುವ ಹೂವು. ಇದು ಹೆಸರಿಗೆ ತಕ್ಕಂತೆ ಸೂರ್ಯನನ್ನೇ ಅನುಸರಿಸಿ ಹೋಗುವ ಹೂವು. ಹಲವಾರು ಜನ ಕವಿಗಳಿಗೆ ಅಚ್ಚುಮೆಚ್ಚು. ಈ ಸಸ್ಯದ ಕಾಳುಗಳಿಂದ ಎಣ್ಣೆಯನ್ನು ತಯಾರಿಸುತ್ತಾರೆ ಇದು ಕಾವ್ಯ ಪ್ರಪಂಚಕ್ಕೆ ಹೆಸರುವಾಸಿಯಾದ ಒಂದು ಸುಂದರ ಹೂವು.

ಪ್ರಾಣಿ ಪ್ರಪಂಚಕ್ಕೆ ತನ್ನದೇ ಆದ ಒಂದು ವ್ಯವಸ್ಥೆ ಇದೆ ಕೆಲವು ಪ್ರಾಣಿಗಳು ತಮ್ಮದೇ ಆದ ಒಂದು ಸೀಮೆಯನ್ನು ನಿರ್ಮಿಸಿಕೊಂಡಿರುತ್ತವೆ. ಸಿಂಹಗಳು ತಮ್ಮ ಸಾಮ್ರಾಜ್ಯವನ್ನು ನಿರ್ಮಿಸಲು ತಮ್ಮ ಮೈಯನ್ನು ತನ್ನ ಗಡಿಯ ಉದ್ದಕ್ಕೂ ಉಜ್ಜುತ್ತಾ ಗಡಿಯನ್ನು ನಿರ್ಮಿಸಿಕೊಳ್ಳುತ್ತವೆ. ಹಕ್ಕಿಗಳು ಹಾಡುತ್ತಾ ತಮ್ಮ ಸಾಮಾರ್ಜ್ಯವನ್ನು ನಿರ್ಮಿಸುತ್ತವೆ. ಹೀಗೆ ಈ ವಿಷಯವನ್ನು ಅರಿತಿದ್ದರೆ ಕನ್ನಡ ಕಾವ್ಯಗಳಲ್ಲಿ, ಕಥೆಗಳಲ್ಲಿ ಈ ಪ್ರಾಣಿಪಕ್ಷಿಗಳನ್ನು ಹೋಲಿಸುತ್ತಾ ಸಾಹಿತ್ಯ ರಚಿಸಲು ಉತ್ತಮ ಸಾಹಿತ್ಯ ರಚನೆಯಾಗಲು ಸಾಧ್ಯವಾಗುತ್ತದೆ. ಹೀಗೆ ನಮ್ಮ ಕನ್ನಡ ಸಾಹಿತ್ಯದ ಮೂಲಕ ಪ್ರಾಣಿ ಪಕ್ಷಿಗಳ ಗುಣಗಳನ್ನು ತಿಳಿಸಲು ಸಹಾಯಕವಾಗುತ್ತದೆ.

ಮಾನವನಿಗಿಂತ ಪ್ರಾಣಿಗಳೆ ಸಾಂಘಿಕ ಬದಕನ್ನು ಮಾಡುವುದರಲ್ಲಿ ತುಂಬಾ ಒಗ್ಗಟ್ಟು. ಏಕೆಂದರೆ ಮಾನವ ಹೀಗೆ ಬದುಕುವುದು ಕಷ್ಟ. ಜಿಂಕೆ, ಕಡವೆ, ಆನೆಗಳು, ಪಾರಿವಾಳಗಳು ಗುಂಪಾಗಿ ಬಾಳುತ್ತವೆ. ತಮ್ಮ ಗುಂಪಿನ ಒಂದು ಪ್ರಾಣಿಗೆ ಕಷ್ಟ ಬಂದರೂ ಸಹ ಎಲ್ಲವೂ ಅವುಗಳನ್ನು ರಕ್ಷಿಸುತ್ತವೆ. ಇದರಿಂದ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಸಂದೇಶವನ್ನು ಸಾರುತ್ತಾ ಕಥೆ ಕವಿತೆ ಬರೆಯುವುದರಿಂದ ಓದುಗರಲ್ಲಿ ಉತ್ತಮ ತಿಳುವಳಿಕೆಯನ್ನು ಮೂಡಿಸಲು ಸಾಧ್ಯವಾಗುತ್ತದೆ. ಎಷ್ಟೋ ಜನ ಕವಿಗಳು ತಮ್ಮ ನೀತಿಕಥೆಗಳಲ್ಲಿ ಪಾರಿವಾಳ, ಇರುವೆ ಇವುಗಳನ್ನು ಉದಾಹರಣೆಯಾಗಿ ಇಟ್ಟು ತಮ್ಮ ಸಾಹಿತ್ಯವನ್ನು ರಚಿಸಿರುತ್ತಾರೆ. ಹಾಗಾಗಿ ಈ ಅರಿವನ್ನು ಸಾಹಿತ್ಯದ ಮೂಲಕ ಕಾಣಲು ಸಾಧ್ಯವಿದೆ.

ಯುದ್ಧಗಳು ಪರಿಸರದ ಮೇಲೆ ಮಾಡಿದ ಅಪಾರ ಹಾನಿಯನ್ನು ಇಲ್ಲಿ ಗಮನಿಸಿದರೆ ಭೀಕರವಾಗಿರುತ್ತದೆ. ಜಪಾನ್‌ನ ಹೀರೊಸೀಮಾ ನಾಗಸಾಕಿಗಳು ಅಪಾರ ಹಾನಿಯನ್ನು ಕಂಡವು. ಅಲ್ಲಿನ ಭೂಮಿ ಒಂದು ಹುಲ್ಲು ಕಡ್ಡಿಗಳನ್ನೂ ಸಹ ಬೆಳೆಸದ ಮಟ್ಟಕ್ಕೆ ಬಂದು ನಿಂತಿದೆ. ಅಲ್ಲಿ ಜನಿಸುತ್ತಿರುವ ಮಕ್ಕಳು ಅಂಗವಿಕಲತೆಯನ್ನು ಅನುಭವಿಸುತ್ತಿದ್ದಾರೆ. ಈ ಅರಿವು ನಮ್ಮ ಸಾಮಾನ್ಯರಿಗೆ ಸಾಹಿತ್ಯದ ಮೂಲಕ ಅರಿತರೆ ಮಾತ್ರ ಇದರಿಂದ ಪ್ರಯೋಜನವನ್ನು ಕಾಣುಲು ಸಾಧ್ಯ. ಅಲ್ಲದೆ ಇಂದಿನ ಯುದ್ಧಗಳು ಇಡೀ ಭೂಮಿಯನ್ನೇ ನಾಶಮಾಡುವ ಸಾಧ್ಯತೆಗಳು ಹೆಚ್ಚು. ಈ ಬಾಂಬಿನ ದಾಳಿಗೆ ಹೆದರಿ ಬ್ರಿಟನ್ನಿನ ಜನರು ಜರ್ಮನಿ ದಾಳಿಯ ಸಂದರ್ಭದಲ್ಲಿ ರೈಲ್ವೆಯ ಸುರಂಗದಲ್ಲಿ ಅಡಗಿಕೊಂಡಿರುವುದನ್ನು ಕಾಣುತ್ತೇವೆ. ಇದು ಇಂದು ನಾವು ಮಾಡುವ ಚಟುವಟಿಕೆಗಳಿಂದ ನಮಗೆ ಮತ್ತು ಪರಿಸರಕ್ಕೆ ಆಗುವ ಹಾನಿ ಅಪಾರವಶಗಿದೆ. ಈ ನಿಟ್ಟಿನಲ್ಲಿ ಅರಿವನ್ನು ಮೂಡಿಸಿದರೆ ಸಾಮಾನ್ಯರಿಗೆ ಇದರಿಂದ ತಿಳುವಳಿಕೆ ಹೆಚ್ಚಾಗಿ ಶಾಂತಿ ನೆಲೆಸಲು ಸಾಧ್ಯತೆಗಳಿವೆ.

ನಮ್ಮ ಪರಿಸರ ಪ್ರವಾಸಿಗರನ್ನು ಆಕರ್ಶಿಸುತ್ತದೆ. ಇಲ್ಲಿ ನಾವು ಪ್ರಯಾಣಿಸುವ ಪ್ರತಿ ಸ್ಥಳವೂ ಸಹ ಒಂದೊಂದು ಅಪೂರ್ವ ಸನ್ನಿವೇಶವನ್ನು ಹೇಳುತ್ತದೆ. ಅಂಡಮಾನ್ ಒಂದು ಸುಂದರವಾದ ನಡುಗಡ್ಡೆ. ಇಲ್ಲಿ ದಟ್ಟ ಅರಣ್ಯ 'ಚಿಡಿಯಾ ಟಾಪು' ಇಲ್ಲಿ ಅಪರೂಪದ ಚಿಟ್ಟೆಗಳೂ, ಹಕ್ಕಿಗಳೂ ಇರುವತಾಣ. ಇಲ್ಲಿ ಪ್ರಯಾಣ ಮಾಡುತ್ತಿದ್ದರೆ ಇಲ್ಲಿ ನೂರಾರು ಜೀರುಂಡೆಗಳು ತುಂಬಿದ್ದವು. ಬಹಾಳ ಕಾಲದಿಂದ ಬೆಳೆದ ದೈತ್ಯ ಮರಗಳು. ಒಂದು ಮರ ಬಿದ್ದು ಆನೆಯ ಶವದಂತೆ ಕಾಣುತ್ತಿತ್ತು. ಅಷ್ಟು ದಟ್ಟ ಅರಣ್ಯ. ಮರದಿಂದ ಮರಕ್ಕೆ ಹಬ್ಬಿದ ಬಳ್ಳಿಗಳು ಬಳ್ಳಿ ಎಂದು ನಂಬಲು ಅಸಾಧ್ಯವಾಗಿದ್ದವು ಅಷ್ಟು ಮಟ್ಟಕ್ಕೆ ಇವು ಹಬ್ಬಿ ತನ್ನ ಹಿರಿತನವನ್ನು ತೋರಿಸುತ್ತಿದ್ದವು. ಆ ಕಾಡಿನಲ್ಲಿ 'ಪೊಡಾಕ್' ಎಂಬ ಮರವಿತ್ತು ಅದನ್ನು ಆ ಕಾಡಿನ ಚಿನ್ನ ಎಂದು ಕರೆಯುತ್ತಿದ್ದರು. ಈ ಬಗೆಯ ಅಪರೂಪದ ಮರಗಳನ್ನು ಇಲ್ಲಿ ಕಾಣುತ್ತೇವೆ ಇದು ಪ್ರವಾಸಿಗರಿಗೆ ಒಂದು ಬಗೆಯ ಹಬ್ಬವೇ ಸರಿ.

ಅಲ್ಲಿ ದಟ್ಟವಾದ ಮ್ಯಾಂಗ್ರೋವ್ ಕಾಡುಗಳು, ಇವು ಉಪ್ಪುನೀರನ್ನು ಪಡೆದು ಬೆಳೆಯುತ್ತಿವೆ. ಅದರ ಬೀಜಗಳು ಆ ನೀರಿನಲ್ಲಿ ಬಿದ್ದು ಪ್ರಸಾರವಾಗುತ್ತವೆ. ನೆಲವನ್ನು ಹುಡುಕಿ ಬೆಳೆಯುತ್ತವೆ. ಈ ಕಾಡಿನಲ್ಲಿ ಮೊಸಳೆ ಮೀನುಗಳು ಮೊಟ್ಟೆ ಇಡಲು ಈ ಮ್ಯಾಂಗ್ರೋ ಕಾಡುಗಳನ್ನೇ ಹುಡುಕಿಕೊಂಡು ಹೋಗುತ್ತವೆ. ಇದು ನಮ್ಮ ಪ್ರಕೃತಿಯಲ್ಲಿ ನಡೆಯುವ ವಿಸ್ಮಯಗಳು. ಪ್ರಕೃತಿ ತಾನೇ ತಾನಾಗಿಯು ಎಲ್ಲವನ್ನು ಸೃಷ್ಟಿಸುತ್ತಿದೆ. ನಾವು ಇದನ್ನು ತನ್ನಪಾಡಿಗೆ ತಾನು ಇರಲು ಬಿಟ್ಟುಬಿಡಬೇಕು. ಈ ವಿಚಾರಗಳನ್ನು ಸಾಹಿತ್ಯದ ಮೂಲಕ ತಿಳಿಸಿದರೆ ಉತ್ತಮವಾಗಿ ಓದುಗರನ್ನು ತಲುಪಿ ಉತ್ತಮ ಫಲವನ್ನು ಕಾಣುತ್ತೇವೆ.

ಪ್ರಕೃತಿಯಲ್ಲಿ ಕೆಲವು ಕೀಟಭಕ್ಷಕ ಸಸ್ಯಗಳಿವೆ, ಹಿಮಾಲಯದಲ್ಲಿ ಬೆಣ್ಣೆ ಸಸ್ಯ ಎಂಬ ಮತ್ತೊಂದು ಕೀಟಭಕ್ಷಕ ಸಸ್ಯವಿದೆ. ಇದರ ಎಲೆಯ ಮೇಲೆ ಬೆಣ್ಣೆಯಂತಹ ವಸ್ತು ಕಾಣುತ್ತದೆ. ಇದು ಅಂಟು ರೀತಿಯಲ್ಲಿರುತ್ತದೆ. ಯಾವುದಾದರು ಕೀಟ ಅದರ ಮೇಲೆ ಬಂದು ಕುಳಿತರೆ ಸಾಕು ಅದು ಅಂಟುಭಾಗ ಮೇಲೆಬಂದು ಆ ಕೀಟವನ್ನು ಸುತ್ತಿಕೊಳ್ಳುತ್ತದೆ. ಈ ರೀತಿ ಬಂದಿಯಾದ ಆ ಕೀಟವನ್ನು ಅದರ ರಾಸಾಯನಿಕ ಕಿಣ್ವಗಳು ಮುತ್ತಿ ಮಗಿಸಿಕೊಳ್ಳುತ್ತವೆ. ಆಹಾರ ಹೀರಿದ ನಂತರ ಎಲೆಗಳು ಅಗಲವಾಗುತ್ತವೆ. ಅಲ್ಲದೆ ಕೀಟಾವಶೇಷಗಳನ್ನು ಹೊರಚಲ್ಲುತ್ತವೆ.

ಅದರಂತೆ ಒಂದು "ವೀನಸ್ ಫ್ಲೆ ಟ್ರಾಪ್" ಎಂಬ ನೊಣಹಿಡುಕ ಸಸ್ಯ ಅಮೇರಿಕದಲ್ಲಿ ಯಥೇಚ್ಚವಾಗಿ ಬೇಳೆಯುತ್ತದೆ. ಈ ಬಗೆಯ ವಿಸ್ಮಯಗಳನ್ನು ನಾವು ಪ್ರಕೃತಿಯಲ್ಲಿ ಕಾಣುತ್ತೇವೆ.

ಪ್ರಕೃತಿಯಲ್ಲಿ ಇಂಥಹ ಹಲವಾರು ಭಿನ್ನ ಭಿನ್ನ ವಾದ ಸಾವಿರಾರುಬಗೆಯ ಜೀವಜಂತುಗಳನ್ನು ಕಾಣಬಹುದು. ಇವುಗಳ ಜೀವನ, ವಂಶಾಭಿವೃದ್ದಿ, ಎಲ್ಲವೂ ಒಂದೊಂದು ಬಗೆಯಾಗಿರುವುದರಿಂದ ಅವುಗಳನ್ನು ಉಳಿಸಿಕೊಂಡು ಹೋಗಬೇಕು. ಏಕೆಂದರೆ ಇವುಗಳಲ್ಲಿ ಕೆಲವು ನಮಗೆ ಉಪಯೋಗವಾಗಿರುತ್ತವೆ. ಮತ್ತೆ ಹಲವಾರು ಕೀಟಗಳು ರೈತ ಮಿತ್ರವಾಗಿವೆ. ನಾವು ಒಂದು ಬೆಳೆಗೆ ಕೀಟನಾಶಕಗಳನ್ನು ಸಿಂಪಡಿಸಿದರೆ ಮತ್ತೊಂದು ಕೀಟ ನಾಶವಾಗಿ ನಮ್ಮ ಆಹಾರ ಸರಪಳಿಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಇದರಿಂದ ನಾವು ಸೇವಿಸುವ ಆಹಾರ ಸಹ ವಿಷವಾಗುತ್ತದೆ.

ಅಮೇರಿಕದಲ್ಲಿ ಡಿ.ಡಿ.ಟಿ ಸಿಂಪಡಿಸುವುದನ್ನು ನಿಲ್ಲಿಸಿದರು. ಕಾರಣ ಇದು ಬೆಳೆಯೊಂದಿಗೆ ನೀರನ್ನೂ ಸೇರಿ ನೀರಿನ ಮಾಲಿನ್ಯವನ್ನು ಮಾಡಿದ್ದಲ್ಲದೆ, ಜಲಮೂಲಗಳಿಗೆ ಸೇರಿ ಅಲ್ಲಿನ ಜಲಚರಗಳನ್ನು ನಾಶಮಾಡುತ್ತಿದೆ ಎಂದು ತಿಳಿದು ಅದನ್ನು ನಿಲ್ಲಿಸಲಾಗಿದೆ. ಈ ಬಗೆಯ ಹಲವಾರು ವಿಚಾರಗಳನ್ನು ನಾವು ಪರಿಸರದಲ್ಲಿ ಕಾಣುತ್ತೇವೆ. ಆದುದರಿಂದ ನಾವು ಮುಂದಿನ ಪೀಳಿಗೆಗೆ ಪರಿಸರದ ಮಹತ್ವವನ್ನು ತಿಳಿಸುವುದರೊಂದಿಗೆ ಪರಿಸರ ರಕ್ಷಣೆಯ ಜವಾಬ್ದಾರಿಯನ್ನು ಅರಿಯಬೇಕಾಗಿದೆ.

ಒಟ್ಟಾರೆ ನಮ್ಮ ಪ್ರಕೃತಿ ಅತ್ಯಂತ ಸುಂದರವಾಗಿರುವುದು. ಇಲ್ಲಿ ಎಲ್ಲಾವನ್ನು ನಾವು ಕಾಣುತ್ತೇವೆ. ಹೀಗೆ ಪ್ರಕೃತಿ ನಿತ್ಯ ಚೇತನಗೊಳ್ಳುತ್ತಲೇ ಇರುತ್ತದೆ. ಆದರೆ ನಾವು ಇಲ್ಲಿ ಆ ಪ್ರಕೃತಿಯನ್ನು ಅದರಷ್ಟಕ್ಕೆ ಅದು ಇರಲು ಬಿಟ್ಟರೆ ಮಾತ್ರ ನಾವೂ ಬದುಕುತ್ತೇವೆ ಅದೂ ಸಹ ಸುಂದರವಾಗಿರಲು ಸಾಧ್ಯ. ಈ ಅರಿವನ್ನು ನಾವು ಅರಿತಾಗ ಮಾತ್ರ ಈ ಭೂಮಿಯನ್ನು ಉಳಿಸಲು ಸಾಧ್ಯ.

## ಆಕರ ಗ್ರಂಥಗಳು


•ಜೀವಜಾಲ–ಕೆ.ಪುಟ್ಟಸ್ವಾಮಿ, ಕೃಪಾಕರ ಸೇನಾನಿ–ಒಂಬತ್ತನೇ ಮುದ್ರಣ–೨೦೧೮.

•ಮೀನಾಕ್ಷಿಯ ಸೌಗಂಧ––ಬಿ.ಜಿ.ಎಲ್. ಸ್ವಾಮಿ– ಪ್ರಥಮ ಮುದ್ರಣ–೨೦೧೮

•ಮಹಾಯುದ್ದ – ೧ – ಕೆ. ಪಿ. ಪೂರ್ಣ ಚಂದ್ರ ತೇಜಸ್ವಿ–ಹತ್ತನೇ ಮುದ್ರಣ ೨೦೧೯

• ಅಂಡಮಾನ್ ಕನಸು–ಡಾ. ರಹಮತ್ ತರೀಕೆರೆ.–ನಾಲ್ಕನೇ ಮುದ್ರಣ ೨೦೧೮

•ಪರಿಸರದ ಕತೆ–– ಕೆ. ಪಿ. ಪೂರ್ಣ ಚಂದ್ರ ತೇಜಸ್ವಿ– ಇಪ್ಪತೊಂದನೇ ಮುದ್ರಣ –೨೦೧೦